ನಂತರ ಒಂದು ಪಾಣಿಪಂಚೆಯನ್ನು ಸುತ್ತಿ, ಮೆಲ್ಲಗೆ ಕೈ ಹಿಡಿದೆಬ್ಬಿಸಿ, ಒಳಾಂಗಳದಾಚೆಯ ಮತ್ಯಾವುದೋ ಕೋಣೆಗೆ ಕರೆದುಕೊಂಡು ಹೋದಳು.

ಅಲ್ಲೊಂದು ಕೋಣೆ ಇರುವುದೇ ನನಗೆ ಗೊತ್ತಿರಲಿಲ್ಲ. ಅಚ್ಚರಿಯೆಂದರೆ ಇಡೀ ಮನೆಗೆ ಸಂಬಂಧವೇ ಇರದಂತೆ ಆ ಕೋಣೆ ಅತ್ಯಂತ ಸುಸಜ್ಜಿತವಾಗಿತ್ತು. ಎಲ್ಲಕ್ಕಿಂತಾ ಹೆಚ್ಚಾಗಿ ಮೇಲೆ ಸೀಲಿಂಗ್ ಫ್ಯಾನ್ ಓಡುತ್ತಿತ್ತು. ಹಳೇಗಾಲದ ಮರದ ಕೆತ್ತನೆಯ ಸುಂದರ ಮಂಚ, ಗೋಡೆಗೆ ಹೊಂದಿಕೊಂಡಂತಿದ್ದ ಮರದ ಕಪಾಟುಗಳು, ಎದುರಿನ ದೊಡ್ಡ ನಿಲುವುಗನ್ನಡಿ, ಅಚ್ಚರಿಯ ಮೇಲೆ ಅಚ್ಚರಿ.

ಆ ಜ್ವರದ ತಾಪದಲ್ಲೂ ನಾ ಬೆರಗಾಗಿ, ಅವಳನ್ನೇ ದಂಗು ಬಡಿದು ನಿಟ್ಟಿಸುತ್ತಿರುವಾಗ ಅವಳು ಕಪಾಟೊಂದರ ಬಾಗಿಲು ತೆರೆದು ಹೆಚ್ಚೂಕಮ್ಮಿ ನನ್ನದೇ ಅಳತೆಯ ಹೊಚ್ಚ ಹೊಸತಾದ ಉದ್ದ ಲಂಗ ಹಾಗೂ ರವಿಕೆಯನ್ನು ತೆಗೆದು ಒಂದೂ ಮಾತನಾಡದೇ ನಿಧಾನಕ್ಕೆ ನಂಗೆ ತೊಡಿಸತೊಡಗಿದಳು.

ನಾ ಬಿಟ್ಟ ಬಾಯಿ ಬಿಟ್ಟಂತೆ ನಿಂತಿದ್ದೆ. ಯಾರದಿದು? ಕೇಳಬೇಕೆಂದುಕೊಂಡರೂ ಕೇಳಲಾಗಲಿಲ್ಲ. ಅಥವಾ ಕೇಳಿದೆನೇನೋ. ಅವಳೇನೂ ಹೇಳಲಿಲ್ಲವೆನ್ನಿಸುತ್ತೆ. ಅನಂತರ ಬಾಚಣಿಗೆ ತಂದು ನನ್ನ ಜಡೆ ಬಿಚ್ಚಿ ಯಾವುದೋ ಸುವಾಸನೆ ಎಣ್ಣೆ ಹಾಕಿ ತಾನೇ ಬಾಚಿ ಎರಡು ಜಡೆ ಹಾಕಿದಳು. ಮುಖಕ್ಕೆ ಚಂದದ ಪರಿಮಳದ ಪೌಡರ್ ಹಾಕಿ ಹಣೆಯ ಮೇಲೆ ತಿಲಕವಿಟ್ಟಳು.

ಮಹಡಿಯ ನನ್ನ ಕೋಣೆಯಲ್ಲಿ ಊರಿಂದ ಬರುವಾಗ ತಂದಿದ್ದ ಪುಟಾಣಿ ಕನ್ನಡಿಯೊಂದನ್ನು ಗೋಡೆಯ ಮೊಳೆಗೆ ನೇತು ಹಾಕಿ ಕತ್ತಲ ಮಬ್ಬಿನಲ್ಲಿ ಕಾಣದ ನನ್ನ ಮುಖಕ್ಕೆ ಅಲಂಕಾರ ಮಾಡಿಕೊಂಡು, ಹೇಗೋ ಜಡೆ ಹೆಣೆದುಕೊಂಡು ದಿನಾ ಕಾಲೇಜಿಗೆ ಹೋಗುತ್ತಿದ್ದದ್ದು ಪಕ್ಕನೆ ನೆನಪಿಗೆ ಬಂತು.

ನಂತರ ನನ್ನ ಕೈ ಹಿಡಿದು ಒಳಾಂಗಳದ ಮೆಟ್ಟಿಲ ಮೇಲೆ ಕರೆದುಕೊಂಡು ಬಂದು ಅವಳು ಸದಾ ಕೂರುವ ಜಾಗದಲ್ಲಿ ನನ್ನನ್ನು ಕೂರಿಸಿ, ಅಡುಗೆಮನೆಗೆ ಹೋಗಿ, ಕಂಚಿನ ಹರಿವಾಣದಲ್ಲಿ ನಾಲ್ಕೈದು ಬಾಳೆಹಣ್ಣು, ಸಕ್ಕರೆ ತುಪ್ಪ ಹಾಕಿಕೊಂಡು ಬಂದು ನನ್ನ ಮುಂದಿಟ್ಟು,

'ತಿನ್ನು ಶಕ್ತಿ ಬರುತ್ತೆ' ಅಂದಳು.

ಜ್ವರದಿಂದ ಸುಧಾರಿಸಿಕೊಂಡು ಮತ್ತೆ ಮೊದಲಿನಂತಾಗಲು ನಂಗೆ ನಾಲ್ಕೈದು ದಿನಗಳೇ ಬೇಕಾಯಿತು. ಆ ಮೂರು ದಿನದ ರಾಜೋಪಚಾರದ ನಂತರ ನಾನು ಯಥಾಪ್ರಕಾರ ನನ್ನ ಕೋಣೆಯಲ್ಲೇ ಮಲಗುತ್ತಿದ್ದೆ. ಆಯವ್ವ ಯಥಾಪ್ರಕಾರ ಅದೇ ಮೆಟ್ಟಿಲಲ್ಲಿ ಕೂತು ಎಲ್ಲೋ ಅನ್ಯಮನಸ್ಕಳಾಗಿ ನಿಟ್ಟಿಸುತ್ತಾ ಇರುತ್ತಿದ್ದಳು. ನಾಲ್ಕೈದು ದಿನಗಳ ಹಿಂದೆ ನಡೆದಿದ್ದು ನಿಜವಾ, ಸ್ವಪ್ನವಾ ಎಲ್ಲವೂ ಅಯೋಮಯ. ಮತ್ತೆ ಅವಳು ಒಳಾಂಗಳದ ಮೂಲೆಯ ಕೋಣೆಗೆ ನನ್ನನ್ನು ಕರೆದುಕೊಂಡು ಹೋಗಲೂ ಇಲ್ಲ, ನಾನಾಗಿಯೇ ಆ ಕೋಣೆ ಹುಡುಕಿಕೊಂಡು ಮತ್ತೆ ಹೋಗಲೂ ಇಲ್ಲ.

ಬಹುಶಃ ಸರಿರಾತ್ರಿಯಲ್ಲಿ ನಾ ಕೇಳಿದ ಸದ್ದು ಕೂಡಾ ನನ್ನ ಭ್ರಮೆಯಿರಬೇಕು. ಓದುತ್ತಾ ತೂಕಡಿಕೆ ಬಂದ ಹೊತ್ತಿನಲ್ಲಿ ಇಲಿ, ಹೆಗ್ಗಣವೋ ಮತ್ಯಾವುದಾದರೂ ಪ್ರಾಣಿಯೋ ಏನಾದರೂ ಉರುಳಿಸಿ, ಮೊಳಗಿದ ಕೀರಲು ಶಬ್ದವೇ ಹೆಣ್ಣಿನ ಧ್ವನಿಯಂತೆ ಕೇಳಿರಬೇಕೆಂದು ಅನಂತರ ಅನ್ನಿಸತೊಡಗಿತ್ತು.

ಇಂತಹ ಒಂದು ದಿನದಲ್ಲೇ ನಾನು ನೋಡಿದ್ದು ಅವನನ್ನು! ಅದೇ ಸುಬ್ರಮಣಿ!

ಒಂದು ಬೆಳಿಗ್ಗೆ ಆಯವ್ವ ಕೂರುವ ಒಳಾಂಗಳದ ಅದೇ ಮೆಟ್ಟಿಲಲ್ಲಿ ಕುಳಿತು ಎಲ್ಲೋ ನೋಡುತ್ತಾ ಅವನು ಅಂಬಲಿ ಕುಡಿಯುತ್ತಿದ್ದ. ಅವನನ್ನು ಯಾರೂ ನನಗೆ ಪರಿಚಯಿಸಲಿಲ್ಲ. ಅವನಾಗಿ ಬಂದೂ ತನ್ನ ಪರಿಚಯ ಹೇಳಿಕೊಳ್ಳಲಿಲ್ಲ. ಕಪ್ಪಗಿನ ಸಣಕಲು ವ್ಯಕ್ತಿ. ಮುಂದೆ ಕ್ರಾಫ್, ಹಿಂದೆ ಸಣ್ಣ ಜುಟ್ಟಿತ್ತು. ಅಷ್ಟೇನೂ ಎತ್ತರದ ಮನುಷ್ಯನೇನಲ್ಲ. ಒಂದು ದಟ್ಟಿ, ಮೇಲೊಂದು ಮುರುಟಿದ ಜುಬ್ಬ ಹಾಕಿಕೊಂಡಿದ್ದ.

ನನ್ನನ್ನು ತಲೆ ಎತ್ತಿ ಕೂಡಾ ಅವನು ನೋಡಲಿಲ್ಲ. ನನ್ನ ಅಸ್ತಿತ್ವವೇ ತನ್ನ ಗಮನಕ್ಕೆ ಬಾರದ ಹಾಗೆ ಎಲ್ಲೋ ದಿಟ್ಟಿಸುತ್ತಾ ಕುಳಿತಿದ್ದ. ಅಥವಾ ತನ್ನ ಇರುವಿಕೆಯೇ ಸುಳ್ಳೆನ್ನುವ ಹಾಗೆ ಎದುರುಗಿರುವವರಿಗೆ ತಾನು ಅಗೋಚರನೆನ್ನುವ ಹಾಗೆ ಕುಳಿತಿದ್ದ.

ಯಾರವನು? ಆ ಮನೆಯವನೇ ಅಥವಾ ನೆಂಟನೇ? ಆಯವ್ವಳಲ್ಲದೇ ಮತ್ಯಾರಾದರೂ ಆ ಮನೆಯಲ್ಲಿದ್ದಾರೆಯೇ ಹಾಗಾದರೆ? ಇಡೀ ದಿನ ಅದೇ ಚಡಪಡಿಕೆ. ಕಾಲೇಜು ಮುಗಿದ ನಂತರ ಮನೆಗೆ ಹೋಗಲೂ ಭಯ. ಅಂಜುತ್ತಲೇ ಸಂಜೆ ಮನೆಗೆ ಹೋದರೆ, ಆಯವ್ವ ಎಂದಿನಂತೇ ಪ್ರಯಾಸದಿಂದ